ದಿನಾಂಕ 10.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ 3ನೆ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಜನಿಸುವ ಮೊದಲು ನನ್ನ ಅಜ್ಜ ರಾಮಚಂದ್ರ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ಸಮಯದಲ್ಲಿ ನನಗೆ 3-4 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ ಚಿಕ್ಕಪ್ಪ ಚಂದಪ್ಪನಿಗೆ ರಾಮಚಂದ್ರ, ಮಲಕಪ್ಪ ಮತ್ತು ಭಾಗಮ್ಮ ಎಂಬ 3-ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಶರಣ್ಣಪ್ಪರವರಿಗೆ ರಾಮಚಂದ್ರ ಎಂಬ ಮಗನಿದ್ದು ಆತನು ಮೃತಪಟ್ಟಿರುತ್ತಾನೆ ಎಂದರೆ ಸರಿ. ನನ್ನ ಖಾಸ ಸಹೋದರನಾದ ರಾಮಚಂದ್ರನ ಹೆಂಡತಿಯ ಹೆಸರು ಏನು ಎಂದರೆ ಸಾಕ್ಷಿ ರುಕಮವ್ವ ಎಂದು ಹೇಳುತ್ತಾರೆ. ನನ್ನ ಮಗಳ ಹೆಸರು ರೇಣುಕಾ ಎಂದರೆ ಸರಿ. ನನ್ನ ಮಗಳನ್ನು 1ನೆ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ನನ್ನ ಮಗಳು ರೇಣುಕಾ ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾಳೆ. ನನ್ನ ತಂದೆ ಮೃತಪಟ್ಟ 5-6 ವರ್ಷಗಳ ನಂತರ ನನ್ನ ತಾಯಿ ಮೃತಪಟ್ಟಿರುತ್ತಾಳೆ. ನನ್ನ ತಾಯಿ ಮೃತಪಟ್ಟ ನಂತರ 2-3 ವರ್ಷಗಳ ನಂತರ ನನ್ನ ಹಾಗೂ ನನ್ನ ಅಕ್ಕ ಶಿವಲಿಂಗಮ್ಮಳ ಮದುವೆಯಾಗಿರುತ್ತದೆ. ನನ್ನ ತಂದೆ-ತಾಯಿ ಮೃತಪಟ್ಟ ನಂತರ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನನ್ನ ಚಿಕ್ಕಪ್ಪ ಚಂದಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಹಾಗೂ ನನ್ನ ಅಕ್ಕಳ ಮದಮೆಯನ್ನು ನನ್ನ ಚಿಕ್ಕಪ್ಪ ಚಂದಪ್ಪರವರು ಮಾಡಿರುತ್ತಾರೆ ಎಂದರೆ ಸರಿ. ನಾನು ಅಂದಾಜು 8-10 ವರ್ಷ ವಯಸ್ಸಿದ್ದಾಗ ಬರಗಾಲ ಬಂದಿತ್ತು ಎಂದರೆ ಸರಿ. ಬರಗಾಲ ಬಂದಾಗ ಯಾವುದೆ ಬೆಳೆ ಬಂದಿಲ್ಲ ಎಂದರೆ ಸರಿ.

ನಮ್ಮ ಕುಟುಂಬಂದ ಖರ್ಚು ವೆಚ್ಚಗಳನ್ನು ನನ್ನ ಚಿಕ್ಕಪ್ಪ ಚಂದಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಬರಗಾಲ ಬಂದು ಬೆಳೆ ಬೆಳೆಯದ ಕಾರಣ ನನ್ನ ಚಿಕ್ಕಪ್ಪ ಚಂದಪ್ಪ 4-5 ಸಾವಿರ ಹಣ ಸಾಲ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ನನ್ನ ಮದುವೆಗೆಂದು ನನ್ನ ಚಿಕ್ಕಪ್ಪ ಚಂದಪ್ಪ 5 ಸಾವಿರ ಹಣ ಸಾಲ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ.

ಪ್ರಸ್ತುತವಾಗಿ ದಾವಾಸ್ತಿಯಲ್ಲಿ ಕೆನಾಲ ಹಾದು ಹೋಗಿರುತ್ತದೆ ಎಂದರೆ ಸರಿ.

ಸದರಿ ಕೆನಾಲ ಹಾದು ಹೋಗಿ 20-ವರ್ಷ ಮೆಲ್ಪಟ್ಟು ಆಗಿರುತ್ತದೆ ಎಂದರೆ ಸರಿ. ಕೆನಾಲದ ಪರಿಹಾರದ ಹಣವನ್ನು 3ನೆ ಪ್ರತಿವಾದಿ ಪಡೆದಿರುತ್ತಾನೆ ಎಂದರೆ ಸರಿ. ಕೆನಾಲ ಹಾಕುವ ಸಮಯದಲ್ಲಿ ಸರಕಾರದವರು ಸರ್ವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಯಾದ ನಂತರ ನಾನು ಮುರಗಾನೂರಿನಲ್ಲಿರುವ 1ನೆ ಪ್ರತಿವಾದಿಯ ಮನೆಗೆ ಆಗಾಗ ಹೋಗುವುದು ಬರುವುದು ಮಾಡುತ್ತಿದ್ದೆ ಎಂದರೆ ಸರಿ. ಈ ದಿನ ನಾನು ಮುರಗಾನೂರ ಗ್ರಾಮದಿಂದ ಬಂದಿರುತ್ತೇನೆ. ದಾವಾಸ್ತಿಗಳಲ್ಲಿ 05-ಎಕರೆ 1ನೆ ಪ್ರತಿವಾದಿಯ ಹೆಸರಿನಲ್ಲಿದ್ದು ಮತತು 05-ಎಕರೆ ಜಮೀನು 2ನೆ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಇನ್ನುಳಿದ ಜಮೀನುಗಳು ಉಳಿದ ಪ್ರತಿವಾದಿಗಳ ಹೆಸರಿನಲ್ಲಿವೆ ಎಂದರೆ ಸರಿ. ದಾವಾಸ್ತಿಗಳನ್ನು ಚಂದಪ್ಪರವರು ನಿಂಗಪ್ಪ ತಂದೆ ಸಾಯಬಣ್ಣರವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿ ನನ್ನನ್ನು ಕರೆಸಿಲ್ಲ ಎಂದು ಹೇಳುತ್ತಾರೆ. ನಾನು ದಾವಾ ಹಾಕಿದ ಆಸ್ತಿಗಳಲ್ಲಿ 1ನೆ ಪ್ರತಿವಾದಿ 05-ಎಕರೆ ಜಮೀನನ್ನು ಮತ್ತು 2ನೆ ಪ್ರತಿವಾದಿ 05-ಎಕರೆ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಉಳಿದ ದಾವಾಸ್ತಿಗಳನ್ನು 3, 5 ಮತ್ತು ಇತರ ಪ್ರತಿವಾದಿಯರು ಸಾಗುವಳಿ ಮಾಡುತ್ತಾರೆ ಎಂದರೆ ಸರಿ.

3ನೆ ಪ್ರತಿವಾದಿ ಹಾಗೂ 5ನೆ ಪ್ರತಿವಾದಿಯ ತಂದೆ ಸಾಯಬಣ್ಣರವರು ನಿಂಗಪ್ಪರವರ ಮಕ್ಕಳು ಎಂದರೆ ಸರಿ. 3 ಮತ್ತು 5ನೆ ಪ್ರತಿವಾದಿಯರಿಗಿಂತ ಮುಂಚೆ ನಿಂಗಪ್ಪ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ಸಾಲ ಮಾಡಿದ್ದರಿಂದ ದಾವಾಸ್ತಿಗಳನ್ನು ನಿಂಗಪ್ಪ ಮತ್ತು ಸಾಯಬಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

<u>ಈ ಹಂದತಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ